# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2102 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 25.03.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ 'ನನ್ನ ಆಸ್ತಿ' ಯೋಜನೆಯಡಿ ಹಮ್ಮಿಕೊಳ್ಳಲಾಗಿರುವ 'ಇ-ಪೋಡಿ ಆಂದೋಲನ' ದ ಮೂಲಕ ಇದುವರೆಗೆ ಒಟ್ಟು ಎಷ್ಟು ಪೋಡಿ ಪ್ರಕರಣಗಳನ್ನು ಗುರುತಿಸಲಾಗಿದೆ ಮತ್ತು ಅದರಲ್ಲಿ ಎಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಭೂಮಾಪನ ಇಲಾಖೆಯಲ್ಲಿ 'ನನ್ನ ಆಸ್ತಿ' ಅಥವಾ 'ಇ-ಪೋಡಿ ಆಂದೋಲನ' ಎಂಬ ಹೆಸರಿನ ಯಾವುದೇ ಯೋಜನೆ ಜಾರಿಯಲ್ಲಿರುವುದಿಲ್ಲ.<br><br>ಆದರೆ ರಾಜ್ಯದಲ್ಲಿ ಮಂಜೂರಿ ಜಮೀನುಗಳ ಪೋಡಿ ದುರಸ್ತಿಯನ್ನು ಸ್ವಯಂ ಪ್ರೇರಿತವಾಗಿ ಮಾಡುವ ಸಲುವಾಗಿ ಸರ್ಕಾರವು ರಾಜ್ಯದಲ್ಲಿ ದರಖಾಸ್ತು ಪೋಡಿ ಅಭಿಯಾನ ಪ್ರಾರಂಭಿಸಲಾಗಿದೆ. ಅದರಂತೆ, ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024 ದಿನಾಂಕ 25-11-2024 ರಲ್ಲಿ ನಮೂನೆ 1 ರಿಂದ 5 ಮತ್ತು 6 ರಿಂದ 10 ಗಳ ಭರ್ತಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರಳೀಕರಿಸಿದೆ.<br><br>ರಾಜ್ಯದಲ್ಲಿ ಮಾಹೆ ಫೆಬ್ರುವರಿ-2026ರ ಅಂತ್ಯಕ್ಕೆ ದರಖಾಸ್ತು ಪೋಡಿ ಅಭಿಯಾನದಡಿ ಭೂಮಾಪನ ಶಾಖೆಯಲ್ಲಿ ಸಾಧಿಸಿರುವ ಪ್ರಗತಿ ವಿವರ :-<br><br>ಅನುಬಂಧ-1 ನೀಡಿರುವ ಮಂಜೂರಿದಾರರ ಸಂಖ್ಯೆ: 2,05,211; ಅಳತೆಗೆ ತೆಗೆದುಕೊಂಡಿರುವ ಮಂಜೂರಿದಾರರ ಸಂಖ್ಯೆ: 1,70,224; ಅಳತೆ ಕಾರ್ಯ ಪೂರ್ಣಗೊಳಿಸಿರುವ ಮಂಜೂರಿದಾರರ ಸಂಖ್ಯೆ: 1,45,970<br><br>ದರಖಾಸ್ತು ಪೋಡಿ ಅಭಿಯಾನದಡಿ ಕಂದಾಯ ಶಾಖೆಯಲ್ಲಿ ನಮೂನೆ 1 ರಿಂದ 5ವರೆಗೆ ಸಾಧಿಸಿರುವ ವಿವರ ಅನುಬಂಧದಲ್ಲಿ ನೀಡಿದೆ.<br><br>ಅಲ್ಲದೇ ಬಹುಮಾಲೀಕತ್ವದ ಖಾಸಗಿ/ಹಿಡುವಳಿ ಜಮೀನುಗಳನ್ನು ಏಕ ಮಾಲೀಕತ್ವಕ್ಕೆ ಪರಿವರ್ತಿಸುವ ಉದ್ದೇಶದಿಂದ ರಾಜ್ಯದ ನಗರ ಪ್ರದೇಶದ ವಿಧಾನ ಸಭಾ ಕ್ಷೇತ್ರಗಳನ್ನು ಹೊರತು ಪಡಿಸಿ, ಉಳಿದ 174 ವಿಧಾನ ಸಭಾ ಕ್ಷೇತ್ರಗಳಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಸೆಪ್ಟೆಂಬರ್ -2022 ಅಂತ್ಯದ ವರೆಗೆ ಪೋಡಿ ಮುಕ್ತ ಗ್ರಾಮ ಅಭಿಯಾನದಡಿ ಒಟ್ಟು 16,630 ಗ್ರಾಮಗಳನ್ನು ಅಳತೆಗೆ ಆಯ್ಕೆ ಮಾಡಿಕೊಂಡು ಅಳತೆ ಕಾರ್ಯ ಪೂರೈಸಲಾಗಿದೆ. ನವಂಬರ್-2022 ರಿಂದ ಪೋಡಿ ಮುಕ್ತ ಗ್ರಾಮ ಯೋಜನೆಯನ್ನು ತಂತ್ರಾಂಶದಲ್ಲಿ ಅಳವಡಿಸಿಕೊಂಡು ಒಟ್ಟು 9,743 ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಫೆಬ್ರವರಿ -2026ರ ಅಂತ್ಯಕ್ಕೆ ಒಟ್ಟು 3,230 ಗ್ರಾಮಗಳನ್ನು ಪೂರ್ಣಗೊಳಿಸಲಾಗಿದೆ. |

Nested table within the answer:

| ಅನುಬಂಧ-1 ನೀಡಿರುವ ಮಂಜೂರಿದಾರರ ಸಂಖ್ಯೆ | ಅಳತೆಗೆ ತೆಗೆದುಕೊಂಡಿರುವ ಮಂಜೂರಿದಾರರ ಸಂಖ್ಯೆ | ಅಳತೆ ಕಾರ್ಯ ಪೂರ್ಣಗೊಳಿಸಿರುವ ಮಂಜೂರಿದಾರರ ಸಂಖ್ಯೆ |
|---|---|---|
| 2,05,211 | 1,70,224 | 1,45,970 |

| | | |
|---|---|---|
| (ಆ) | ಆಧಾರ್ ಜೋಡಣೆ ಕುರಿತು ವರದಿಗಳ ಪ್ರಕಾರ 50 ಲಕ್ಷಕ್ಕೂ ಹೆಚ್ಚು ಪೋಡಿ ಪ್ರಕರಣಗಳು ಆಧಾರ್ ಜೋಡಣೆಯಿಂದ ಗುರುತಿಸಲ್ಪಟ್ಟಿವೆ ಎಂದು ತಿಳಿದು ಬಂದಿದ್ದು, ಈ ಪ್ರಕ್ರಿಯೆಯಿಂದ ರೈತರಿಗೆ ಆಗಿರುವ ಅನುಕೂಲಗಳೇನು ಮತ್ತು ಬಾಕಿ ಇರುವ ಪ್ರಕರಣಗಳನ್ನು ಎಷ್ಟು ಕಾಲಮಿತಿ ಯಲ್ಲಿ ಪೂರ್ಣಗೊಳಿಸಲಾಗುವುದು; | ಪಹಣಿಗಳಿಗೆ ಆಧಾರ್ ಜೋಡಣೆ ಸಮಯದಲ್ಲಿ ಗ್ರಾಮ ಆಡಳಿತಾಧಿಕಾರಿಗಳು ರೈತರ ಮನೆಮನೆಗೆ ತೆರಳಿ ಒಟ್ಟು 48,53,332 ಖಾತೆದಾರರನ್ನು ಮೃತ ಎಂದು ಗುರುತಿಸಿರುತ್ತಾರೆ. ಸದರಿ ಮೃತ ಖಾತೆದಾರರಿಗೆ ಪೌತಿ ಖಾತೆ ಮಾಡಲು ಸರ್ಕಾರದ ಆದೇಶ ಸಂಖ್ಯೆ: ಕಂಇ 95 ಎಂ ಆರ್ ಆರ್ 2025, ದಿನಾಂಕ:21-04-2025 ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 95 ಎಂಆರ್ ಆರ್ 2025, ದಿನಾಂಕ:07-03-2026ರಂತೆ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ ಹಾಗೂ ಇ-ಪೌತಿ ತಂತ್ರಾಂಶವನ್ನು ನೀಡಲಾಗಿರುತ್ತದೆ.<br><br>ಸದರಿ ತಂತ್ರಾಂಶದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ಸ್ವಯಂಪ್ರೇರಿತರಾಗಿ ಮನೆಮನೆಗೆ ತೆರಳಿ ಮರಣ ಹೊಂದಿದ ವಾರಸುದಾರರ e-KYC ಪಡೆಯುವ ಮುಖಾಂತರ ವಂಶವೃಕ್ಷ ಹಾಗೂ ಮರಣ ಪ್ರಮಾಣ ಪತ್ರ ಮತ್ತು ಇತರೆ ದಾಖಲಾತಿಗಳನ್ನು ಪಡೆದು ಪೌತಿ ಖಾತೆ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಮುಂದುವರೆದು, ಪಹಣಿಗಳಿಗೆ ಆಧಾರ್ ಜೋಡಣೆ ಮಾಡಿರುವುದರಿಂದ ಪಹಣಿಗೆ ಲಿಂಕ್ ಆಗಿರುವ ನೈಜ ಖಾತೆದಾರರ ಮೊಬೈಲ್ ನಂಬರ್ ಗೆ ಎಸ್.ಎಂ.ಎಸ್. ಮೂಲಕ ಮ್ಯುಟೇಶನ್ ಮಾಹಿತಿಯನ್ನು ಕಳುಹಿಸಲಾಗುತ್ತಿದೆ. ಇದರಿಂದ ಅಕ್ರಮ ವಹಿವಾಟನ್ನು ತಪ್ಪಿಸಬಹುದಾಗಿದೆ. |
| (ಇ) | ಈಗಾಗಲೇ 67 ಕೋಟಿಗೂ ಅಧಿಕ ಪುಟಗಳ ಭೂದಾಖಲೆಗಳು ಡಿಜಿಟಲೀಕರಣಗೊಂಡಿವೆ ಎಂದು ಹೇಳಲಾಗುತ್ತಿದೆ; ಈ ಡಿಜಿಟಲ್ ದಾಖಲೆಗಳ ಸುರಕ್ಷತೆಗಾಗಿ ಮತ್ತು ನಕಲಿ ದಾಖಲೆ ಸೃಷ್ಟಿ ತಡೆಯಲು ಸರ್ಕಾರ ಕೈಗೊಂಡಿರುವ ತಾಂತ್ರಿಕ ಕ್ರಮಗಳೇನು; | ರಾಜ್ಯದ ಒಟ್ಟು 30,715 ಗ್ರಾಮಗಳ ಗ್ರಾಮ ನಕಾಶೆಗಳ ಪೈಕಿ 30,141 ಗ್ರಾಮ ನಕಾಶೆಗಳ ಡಿಜಿಟೈಸ್ ಮಾಡಿ ಪರಿಶೀಲನೆಯಿಂದ ಅಂತಿಮಗೊಳಿಸಲಾಗಿದೆ ಮತ್ತು ಇಲಾಖೆಯಲ್ಲಿಯ 1.65 ಕೋಟಿ ಭೂದಾಖಲೆಗಳ ಪೈಕಿ 1.43 ಕೋಟಿ ಭೂದಾಖಲೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ. ಈ ಎಲ್ಲಾ ಭೂದಾಖಲೆಗಳನ್ನು ಆಧುನಿಕ ತಂತ್ರಜ್ಞಾನ ಬಳಸಿ ಡಿಜಿಟೈಸ್ ಮಾಡಿ ಡಿಜಿಟಲ್ ಮಾಧ್ಯಮದಲ್ಲಿ ಸಂಗ್ರಹಿಸಲಾಗಿರುತ್ತದೆ ಮತ್ತು ಈ ದಾಖಲೆಗಳನ್ನು ಸಾರ್ವಜನಿಕರಿಗೆ PDF format ನಲ್ಲಿ ವೀಕ್ಷಿಸಲು ಅವಕಾಶ ಕಲ್ಪಿಸಿದ್ದು, ಇದರಿಂದ ಯಾವುದೇ ನಕಲು ದಾಖಲೆ ಸೃಷ್ಟಿಸಲು ಸಾಧ್ಯವಿರುವುದಿಲ್ಲವಾದ್ದರಿಂದ ಸದರಿ ದಾಖಲೆಗಳು ಸಂಪೂರ್ಣ ಸುರಕ್ಷಿತವಾಗಿರುತ್ತದೆ.<br><br>ಕಂದಾಯ ದಾಖಲೆಗಳ ಗಣಕೀಕರಣ ತಂತ್ರಾಂಶದಲ್ಲಿ ಕಡತ ಮತ್ತು ವಹಿಗಳ ಇಂಡೆಕ್ಸಿಂಗ್, ಕ್ಯಾಟಲಾಗಿಂಗ್, ಸ್ಕ್ಯಾನಿಂಗ್ ಮತ್ತು ಅಪ್ಲೋಡ್ ಮಾಡುವಂತಹ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಕಛೇರಿ ಟಿಪ್ಪಣಿಗಳು, ಆದೇಶಗಳು, ಸುತ್ತೋಲೆಗಳು, ನಡಾವಳಿಗಳು ಮುಂತಾದ ವಿವಿಧ ರೀತಿಯ ದಾಖಲೆಗಳನ್ನು ಪ್ರತ್ಯೇಕವಾಗಿ ಸ್ಕ್ಯಾನ್ ಮಾಡಿ, ಸೂಕ್ತವಾದ ಕೀವರ್ಡ್‌ಗಳೊಂದಿಗೆ ಟ್ಯಾಗ್ ಮಾಡಿ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಲಾಗುತ್ತದೆ. ಸದರಿ ಕೀವರ್ಡ್‌ಗಳಿಂದ ತಂತ್ರಾಂಶದಲ್ಲಿ ಅಳವಡಿಸಲಾದ ಸುಲಭವಾಗಿ ಹುಡುಕಿ ತ್ವರಿತವಾಗಿ ಸಾರ್ವಜನಿಕರಿಗೆ ದಾಖಲೆಗಳನ್ನು ಒದಗಿಸಲಾಗುತ್ತಿದೆ. ಸದರಿ ಡಿಜಟಲೀಕರಣ ದಾಖಲೆಗಳನ್ನು ಶಿರಸ್ತೇದಾರರು, ತಹಶೀಲ್ದಾರರು ಮತ್ತು ಉಪವಿಭಾಗಾಧಿಕಾರಿಗಳು ಪರಿಶೀಲನೆ ಮಾಡುವುದರಿಂದ ಹಾಗೂ ಸದರಿ ಯೋಜನೆಯಡಿ ದಾಖಲೆಗಳನ್ನು ಡಿಜಿಟಲ್ ಸಹಿ ಹೊಂದಿರುವ ದಾಖಲೆಗಳನ್ನೇ ವಿತರಿಸಲಾಗುವುದರಿಂದ ನಕಲಿ ದಾಖಲೆ ಸೃಷ್ಟಿಸುವುದನ್ನು ತಡೆಯಬಹುದಾಗಿದೆ. |

| | | |
|---|---|---|
| (ಈ) | ಸರ್ಕಾರಿ ಜಮೀನುಗಳ ರಕ್ಷಣೆಗಾಗಿ ಜಾರಿಗೆ ತಂದಿರುವ 'ಲ್ಯಾಂಡ್ ಬೀಟ್' ತಂತ್ರಜ್ಞಾನದಡಿ ಇದುವರೆಗೆ ಎಷ್ಟು ಎಕರೆ ಸರ್ಕಾರಿ ಜಮೀನನ್ನು ಸರ್ವೆ ಮಾಡಿ ರಕ್ಷಿಸಲಾಗಿದೆ; | ರಾಜ್ಯದಲ್ಲಿನ ಅತ್ಯಮೂಲ್ಯ ಸರ್ಕಾರಿ ಜಮೀನುಗಳು ಅನಧಿಕೃತ ಒತ್ತುವರಿಯಾಗುವುದನ್ನು ತಪ್ಪಿಸಲು Land Beat ಮೊಬೈಲ್ ಆಪ್ ಅಭಿವೃದ್ಧಿಪಡಿಸಿದ್ದು, ರಾಜ್ಯದಲ್ಲಿರುವ 14,31,575 ಸರ್ಕಾರಿ ತಾಕುಗಳ ಛಾಯಾಚಿತ್ರ ಹಾಗೂ ವಿಡಿಯೋ ಹಾಗೂ Geo-Fencing ಡಾಟಾವನ್ನು ತಂತ್ರಾಂಶದಲ್ಲಿ ಅಳವಡಿಸಲಾಗುತ್ತಿದೆ. ಅದರಂತೆ, 2,88,972 ಕಂದಾಯ ಜಮೀನುಗಳನ್ನು ಅಂದರೆ ಒಟ್ಟು 26,17,261 ಎಕರೆ ಕಂದಾಯ ಭೂಮಿಯನ್ನು ಲ್ಯಾಂಡ್ ಬೀಟ್ ತಂತ್ರಾಂಶದ ಮೂಲಕ ಗುರುತಿಸಲಾಗಿರುತ್ತದೆ. |
| (ಉ) | ಮೊದಲ ಬಾರಿಗೆ ಡ್ರೋನ್ ತಂತ್ರಜ್ಞಾನದ ಮೂಲಕ ಮರು-ಸರ್ವೆ ಕಾರ್ಯ ನಡೆಯುತ್ತಿದ್ದು, ಪ್ರಸ್ತುತ ಯಾವ ಜಿಲ್ಲೆಗಳಲ್ಲಿ ಈ ಕಾರ್ಯ ಪೂರ್ಣಗೊಂಡಿದೆ ಮತ್ತು ಇದರಿಂದ ಸಾರ್ವಜನಿಕರಿಗೆ ದೊರೆಯುವ ಪ್ರಯೋಜನಗಳೇನು? | ಆಧುನಿಕ ತಂತ್ರಜ್ಞಾನ ಆಧಾರಿತ ಡ್ರೋಣ್ ಮೂಲಕ ಸರ್ವೆ ಕಾರ್ಯ ಕೈಗೊಂಡು ಡಿಜಿಟಲ್ ಮಾಧ್ಯಮದಲ್ಲಿ ಭೂದಾಖಲೆಗಳನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಡ್ರೋಣ್ ಸರ್ವೆ ಕಾರ್ಯ ಕೈಗೊಳ್ಳಲು ದಿನಾಂಕ:04-02-2022ರ ಸರ್ಕಾರದ ಆದೇಶದನ್ವಯ ರಾಜ್ಯದ 21 ಜಿಲ್ಲೆಗಳಲ್ಲಿ ಡ್ರೋಣ್ ಸರ್ವೆ ಕಾರ್ಯವನ್ನು ಕೈಗೊಳ್ಳಲಾದಂತೆ, ಕೃಷಿ ಜಮೀನಿನ ಸಂಬಂಧಿಸಿದಂತೆ ಮರುಭೂಮಾಪನ ಕೈಗೊಂಡು ಅವರ ಜಮೀನಿನ ನಕ್ಷೆಯೊಂದಿಗೆ ಆರ್.ಟಿ.ಸಿ ಸಿದ್ಧಪಡಿಸಬಹುದಾಗಿರುತ್ತದೆ. ರಾಜ್ಯದ 21 ಜಿಲ್ಲೆಗಳ ಒಟ್ಟು 1,43,484 ಚ.ಕೀ.ಮೀ ವಿಸ್ತೀರ್ಣದಲ್ಲಿ 1,21,644 ಚ.ಕಿ.ಮೀ ರಲ್ಲಿ ಡ್ರೋಣ್ ಹಾರಾಟ ಪೂರ್ಣಗೊಂಡಿರುತ್ತದೆ.<br><br>ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕು ಉಯ್ಯಂಬಳ್ಳಿ ಹೋಬಳಿಯ 33 ಗ್ರಾಮಗಳಲ್ಲಿ ಡ್ರೋಣ್ ಮರುಭೂಮಾಪನದಡಿ 23,085 ಕರಡು ಆರ್.ಟಿ.ಸಿಗಳನ್ನು ವಿತರಿಸಲಾಗಿರುತ್ತದೆ.<br><br>ಡ್ರೋನ್ ಸರ್ವೇಯ ಪ್ರಯೋಜನಗಳು :-<br><br>1. ಹತ್ತನೇ ಒಂದು ಭಾಗದ ಸಮಯದಲ್ಲಿ ಪ್ರತಿಯೊಂದು ಆಸ್ತಿಯ ಗಣಕೀಕೃತ, ಜಿಯೋ-ರೆಫರೆನ್ಸ್ ಆಗಿರುವ, ನಿಖರವಾದ ಡಿಜಿಟಲ್ ನಕ್ಷೆಯು ಸಿದ್ಧಗೊಳ್ಳುತ್ತದೆ. ಡ್ರೋನ್/ಯುಎವಿ ಆಧಾರಿತ ಸರ್ವೇ ಕಾರ್ಯದ ತ್ವರಿತತೆಯನ್ನು ಹೆಚ್ಚಿಸುತ್ತದೆ.<br>2. ಡ್ರೋಣ್ ಸರ್ವೇ ಕಾರ್ಯದ ನಿಖರತೆಯು ಸಾಂಪ್ರದಾಯಿಕ ಭೂಮಾಪನ ಕಾರ್ಯದ ನಿಖರತೆಗಿಂತಲೂ ಹೆಚ್ಚಿನದಾಗಿರುತ್ತದೆ. ಸಾಂಪ್ರದಾಯಿಕ ಪದ್ಧತಿಯ ಅಳತೆಯಲ್ಲಿ ವ್ಯಕ್ತಿಗತವಾದ ಪಕ್ಷಪಾತ ಮತ್ತು ತಪ್ಪುಗಳು ಸಾಧ್ಯತೆಯಿರುತ್ತವೆ.<br>3. ಡ್ರೋಣ್ ಆಧಾರಿತ ಸರ್ವೇ ಕಾರ್ಯವು ಕೇವಲ ಕಡಿಮೆ ಅವಧಿ ತೆಗೆದುಕೊಳ್ಳುವುದರ ಜೊತೆಗೆ ಸಾಂಪ್ರದಾಯಿಕ ಪದ್ಧತಿಯ ಅಳತೆಗಿಂತ ಕಡಿಮೆ ವೆಚ್ಚದಲ್ಲಿ ನಿರ್ವಹಿಸಬಹು ದಾಗಿರುತ್ತದೆ.<br>4. ಡ್ರೋಣ್ ಸರ್ವೇ ಕಾರ್ಯವು ವಸ್ತು ನಿಷ್ಠ ಮತ್ತು ನಿಖರವಾಗಿದ್ದು, ಯಾವುದೇ ಹಸ್ತಕ್ಷೇಪ ಮಾಡಲು ಅವಕಾಶವಿರುವುದಿಲ್ಲ. ಇದರಲ್ಲಿ ವ್ಯಕ್ತಿಗತವಾದ ಪಕ್ಷಪಾತಕ್ಕೆ ಹಾಗೂ ಯಾವುದೇ ರೀತಿಯಲ್ಲಿ ದ್ವಂದ್ವಗಳಿಗೆ ಅವಕಾಶ ಇರುವುದಿಲ್ಲ. |

ಸಂಖ್ಯೆ: ಕಂಇ 89 ಎಸ್ ಎಸ್ ಸಿ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

# ಅನುಬಂಧ-1
## ನಮೂನೆ 1-5 ವರದಿ

| District Name | Application Processed | Total Number of Grantees In Form 1 | Number of Applications Having 1+3+4 > Akarbandh: Numbers | Number of Applications Having 1+3+4 > Akarbandh: Grantees | Number of Applications Having Area 1+3+4 <= Akarbandh | Total Number of Anubandha Approved | Number of Grantees - Anubandha-1 Generated | Number of Grantees in Form3 (fit cases) | Number of Grantees in Form4 (fit cases) | Number of Applications approved by Tahsildar But No Grantees in Form 1 | Number of Grantees - Sent to AC for Cancellation of Grant | Number of Grantees - Sent to Missing Committee | Number of Grantees - Granted but not implemented in RTC | Number of Grantees - Durasti done and implemented in RTC | Number of Grantees - Durasti done not implemented in RTC | Number of Grantees - Granted but saguvali cheeti not issued | Number of Grantees - Hangami saguvali cheeti issued but permanent saguvali cheeti not issued | The case is under investigation, you cannot create anubanda report | Due to court stay, you cannot create anubanda report | Grantee falls within the ULB limits as per the rules in force at the time of the grant |
|---|---|---|---|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
| Yadagir | 2168 | 4498 | 70 | 500 | 1098 | 221 | 649 | 1000 | 30 | 1000 | 1 | 3777 | 38 | 0 | 3 | 0 | 3 | 0 | 0 | 0 |
| VIJAYAPURA | 1710 | 548 | 0 | 0 | 226 | 34 | 108 | 1484 | 155 | 1484 | 8 | 260 | 3 | 2 | 11 | 0 | 1 | 1 | 0 | 0 |
| VIJAYANAGARA | 3610 | 8190 | 117 | 726 | 3063 | 647 | 2006 | 430 | 41 | 430 | 7 | 6100 | 32 | 0 | 9 | 0 | 5 | 30 | 0 | 0 |
| Uttar Kannada | 1064 | 2594 | 1 | 2 | 985 | 172 | 473 | 78 | 87 | 78 | 0 | 1982 | 8 | 22 | 14 | 0 | 3 | 0 | 0 | 8 |
| UDUPI | 7705 | 36514 | 110 | 659 | 6827 | 6219 | 31989 | 768 | 101 | 768 | 33 | 2037 | 11 | 15 | 519 | 0 | 45 | 8 | 15 | 1794 |
| TUMAKURU | 8785 | 43876 | 762 | 6888 | 6987 | 4218 | 21400 | 1036 | 2643 | 1036 | 1118 | 14261 | 1455 | 628 | 990 | 73 | 9 | 644 | 34 | 677 |
| SHIVAMOGGA | 1873 | 6436 | 109 | 1414 | 1493 | 391 | 1217 | 271 | 15 | 271 | 185 | 4655 | 4 | 28 | 3 | 316 | 46 | 41 | 0 | 0 |
| Raichur | 1728 | 5068 | 80 | 425 | 1394 | 260 | 792 | 254 | 45 | 254 | 1 | 4161 | 66 | 2 | 5 | 0 | 1 | 0 | 0 | 0 |
| Mysore | 3683 | 25310 | 490 | 16661 | 2409 | 1158 | 7243 | 784 | 409 | 784 | 1058 | 15778 | 411 | 59 | 56 | 3 | 6 | 53 | 7 | 231 |
| mandya | 2428 | 20709 | 282 | 10202 | 1913 | 682 | 3542 | 233 | 1152 | 233 | 10976 | 4142 | 599 | 120 | 166 | 1 | 2 | 1 | 0 | 29 |
| koppal | 1702 | 5560 | 137 | 1143 | 1396 | 705 | 2297 | 169 | 82 | 169 | 2345 | 575 | 30 | 26 | 200 | 10 | 8 | 2 | 0 | 0 |
| KOLAR | 5720 | 47690 | 705 | 13208 | 3467 | 1524 | 7724 | 1548 | 7624 | 1548 | 194 | 29325 | 721 | 1559 | 10 | 10 | 22 | 529 | 3 | 0 |
| Kodagu | 2711 | 12954 | 139 | 1957 | 1993 | 1283 | 4739 | 579 | 1531 | 579 | 94 | 6131 | 248 | 60 | 0 | 0 | 9 | 22 | 4 | 125 |
| KALABURAGI | 3314 | 7448 | 179 | 1482 | 2532 | 543 | 1664 | 603 | 154 | 603 | 313 | 5141 | 67 | 4 | 42 | 4 | 2 | 0 | 0 | 66 |
| Haveri | 900 | 3091 | 36 | 366 | 532 | 138 | 874 | 332 | 317 | 332 | 39 | 1795 | 14 | 1 | 1 | 0 | 9 | 0 | 50 | 0 |
| Hassan | 8095 | 65029 | 636 | 14125 | 7009 | 3575 | 25209 | 450 | 2652 | 450 | 8847 | 24495 | 2193 | 330 | 534 | 615 | 12 | 160 | 40 | 250 |
| Gadag | 248 | 529 | 0 | 0 | 110 | 0 | 0 | 138 | 23 | 138 | 53 | 454 | 0 | 0 | 0 | 0 | 0 | 0 | 0 | 0 |
| DHARWAD | 291 | 530 | 1 | 1 | 144 | 22 | 202 | 146 | 229 | 146 | 0 | 4 | 6 | 4 | 23 | 50 | 0 | 12 | 0 | 0 |
| Davanagere | 2216 | 14000 | 133 | 1764 | 1604 | 865 | 7003 | 479 | 193 | 479 | 166 | 6168 | 323 | 4 | 139 | 2 | 16 | 0 | 3 | 0 |
| Dakshina Kannada | 19764 | 77328 | 361 | 1620 | 18872 | 17508 | 61703 | 531 | 392 | 531 | 592 | 13231 | 261 | 9 | 156 | 1 | 22 | 123 | 3 | 855 |
| chitradurga | 3998 | 22964 | 230 | 2360 | 2988 | 1610 | 9799 | 780 | 2244 | 780 | 903 | 9695 | 32 | 186 | 12 | 116 | 23 | 3 | 0 | 0 |
| CHIKKAMAGALURU | 4284 | 13836 | 214 | 1395 | 3379 | 1102 | 3371 | 691 | 93 | 691 | 1047 | 7337 | 68 | 91 | 26 | 557 | 24 | 1197 | 20 | 40 |
| Chikkaballapur | 3475 | 18804 | 237 | 1768 | 3139 | 1709 | 7674 | 99 | 906 | 99 | 331 | 7678 | 739 | 585 | 454 | 12 | 12 | 55 | 8 | 371 |
| Chamarajanagara | 2920 | 8619 | 119 | 910 | 2755 | 797 | 1902 | 46 | 110 | 46 | 56 | 6454 | 54 | 26 | 9 | 8 | 17 | 0 | 0 | 1 |
| Bidar | 1941 | 3604 | 298 | 3299 | 756 | 149 | 458 | 887 | 5 | 887 | 416 | 2569 | 104 | 0 | 71 | 4 | 0 | 0 | 0 | 0 |
| Bengaluru South | 1670 | 31028 | 61 | 2504 | 1491 | 559 | 4271 | 118 | 2965 | 118 | 2135 | 19582 | 1312 | 289 | 1232 | 19 | 34 | 52 | 2 | 0 |
| BENGALURU | 637 | 109 | 2 | 5 | 23 | 10 | 33 | 612 | 0 | 612 | 10 | 63 | 2 | 0 | 1 | 0 | 1 | 0 | 0 | 0 |
| BELAGAVI | 2105 | 3472 | 229 | 431 | 1209 | 88 | 624 | 667 | 442 | 667 | 10 | 2315 | 2 | 5 | 124 | 0 | 4 | 6 | 0 | 1 |
| Bangalore Rural | 2289 | 21175 | 480 | 10238 | 1565 | 805 | 6337 | 244 | 4405 | 244 | 1023 | 7580 | 981 | 89 | 118 | 22 | 33 | 55 | 134 | 437 |
| BALLARI | 2785 | 5190 | 190 | 421 | 2533 | 1060 | 1487 | 62 | 381 | 62 | 2824 | 441 | 22 | 1 | 23 | 0 | 1 | 11 | 0 | 0 |
| Bagalkote | 373 | 197 | 1 | 1 | 98 | 13 | 31 | 274 | 85 | 274 | 0 | 51 | 0 | 0 | 0 | 34 | 0 | 0 | 0 | 0 |
| Total | 106192 | 516900 | 6409 | 96475 | 83990 | 48067 | 216821 | 15793 | 29511 | 15793 | 34785 | 208237 | 9806 | 4145 | 4951 | 1857 | 370 | 3005 | 323 | 4885 |